2017 ಕ.ತೀ.ವ. 1783

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

## ಕರ್ನಾಟಕ ರಾಜ್ಯ, (ಪೋಲೀಸ್ ಇನ್ಸ್‌ಪೆಕ್ಟರ್, ಚೆನ್ನಮ್ಮನಕೆರೆ ಅಚ್ಚುಕಟ್ಟು ಪೋಲೀಸ್ ಠಾಣೆ ರವರಿಂದ ಪ್ರತಿನಿಧಿತ, ಬೆಂಗಳೂರು ನಗರ) –ವಿರುದ್ಧ– ರಮೇಶ್ ಮತ್ತು ಇನ್ನೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆಯ 378(1) ಮತ್ತು (3)ನೇ ಪ್ರಕರಣಗಳ ಮೇರೆಗಿನ ಕ್ರಿಮಿನಲ್ ಅಪೀಲು.

ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 323, 504, 326, 427ನೇ ಪ್ರಕರಣಗಳ ಅಡಿಯಲ್ಲಿ ದಂಡನಾರ್ಹ ಅಪರಾಧಗಳಿಗಾಗಿ ಪ್ರತ್ಯರ್ಜಿದಾರ–ಆಪಾದಿತನನ್ನು ಖುಲಾಸೆಗೊಳಿಸಿ ಸಿ.ಸಿ.ಸಂಖ್ಯೆ 23501/2005ರಲ್ಲಿ ಬೆಂಗಳೂರಿನ IIನೇ ಹೆಚ್ಚುವರಿ ಸಿ.ಎಂ.ಎಂ. ರವರಿಂದ ದಿನಾಂಕ 22.01.2015ರಂದು ಹೊರಡಿಸಲಾದ ತೀರ್ಪು ಮತ್ತು ಆದೇಶದ ವಿರುದ್ಧ ಅಪೀಲನ್ನು ಹೂಡುವುದಕ್ಕೆ ಅನುಮತಿಯನ್ನು ಕೋರಿ ಈ ಅಪೀಲನ್ನು ಸಲ್ಲಿಸಲಾಗಿದೆ.

ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಅಪರಾಧಗಳು ಹಾಗೂ ಸಂಜ್ಞೇಯವಲ್ಲದ ಮತ್ತು ಜಾಮೀನಿಯ ಅಪರಾಧಗಳು ಸಂಬಂಧದಲ್ಲಿ ಭಾರತ ದಂಡ ಸಂಹಿತೆಯ ವಿವಿಧ ಪ್ರಕರಣಗಳ ಅಡಿಯಲ್ಲಿ ವಿವಿಧ ದಂಡನೀಯ ಅಪರಾಧಗಳು ಒಳಗೊಂಡಿರುವ ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ, ಆರೋಪಿಯನ್ನು, ಅಪರಾಧಗಳ ಸಂಬಂಧದಲ್ಲಿ, ನಿರಪರಾಧಿಯೆಂದು ನಿರ್ಣಯಿಸಿದ್ದಲ್ಲಿ, ಸೆಷನ್ಸ್ ನ್ಯಾಯಾಲಯದ ಮುಂದೆ ಪಬ್ಲಿಕ್ ಪ್ರಾಸಿಕ್ಯೂಟರ್ ಮೂಲಕ ಸರ್ಕಾರದಿಂದ ದಾಖಲು ಮಾಡಬಹುದಾದ ಅಂಥ ಅಗತ್ಯ ಅಂಶದಲ್ಲಿ ಸಹ ನಿರಪರಾಧಿ ನಿರ್ಣಯ ಆದೇಶದ ವಿರುದ್ಧದ ಅಪೀಲನ್ನು

* ಕ್ರಿಮಿನಲ್ ಅಪೀಲು ಸಂ. 1367/2015, ದಿನಾಂಕ: 8ನೇ ಜೂನ್, 2016.

**"ಕ್ರಿಮಿನಲ್ ಪ್ರಕರಣ" ರಷ್ಟರ ಮಟ್ಟಿಗೆ, ಮಾತ್ರವಾಗಿದೆಯೆಂಬುದನ್ನು ನಾವು ಸ್ಪಷ್ಟಪಡಿಸಿದ್ದೇವೆ. ಅಂಥ ಕ್ರಿಮಿನಲ್ ಪ್ರಕರಣ, ವಿವಿಧ ದಂಡನೀಯ ಪ್ರಕರಣಗಳನ್ನು ಒಳಗೊಂಡಿದ್ದರೂ, ಕ್ರಿಮಿನಲ್ ಪ್ರಕರಣವನ್ನು ಪ್ರತ್ಯೇಕಿಸಲಾಗದು, ಹಾಗೆಯೇ ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟ್‌ರಿಂದ ಮಾಡಿದ ನಿರಪರಾಧಿ ನಿರ್ಣಯ ಆದೇಶದ ವಿರುದ್ಧವಾಗಿ, ಸರ್ಕಾರದಿಂದ ಎರಡು ಅಪೀಲುಗಳನ್ನು ಅಂದರೆ, ಒಂದು ಸಂಜ್ಞೇಯ ಅಪರಾಧಗಳ ವಿರುದ್ಧ ಮತ್ತು ಬೇರೊಂದು ಸಂಜ್ಞೇಯವಲ್ಲದ ಅಪರಾಧಗಳ ವಿರುದ್ಧ ದಾಖಲಿಸಲಾಗದು. ಹಾಗಾಗಿ, ನಿರಪರಾಧಿ ನಿರ್ಣಯ ಆದೇಶದ ವಿರುದ್ಧ ಸೆಷನ್ಸ್ ನ್ಯಾಯಾಲಯದ ಮುಂದೆ ಈ ಅಪೀಲು ಬಂದಿದ್ದು, ಆರೋಪಿಯನ್ನು ಸಂಜ್ಞೇಯ ಹಾಗೂ ಸಂಜ್ಞೇಯವಲ್ಲದ ಮತ್ತು ಜಾಮೀನಿಯ ಹಾಗೂ ಜಾಮೀನಿಯವಲ್ಲದಂತೆ ಎರಡೂ ಅಪರಾಧಗಳಲ್ಲಿ ನಿರಪರಾಧಿಯೆಂದು ನಿರ್ಣಯಿಸಲಾಗಿದೆ.**

**ಹಾಗಾಗಿ, ಊರ್ಜಿತ ಯೋಗ್ಯವಾಗಿರದ ಅಪೀಲನ್ನು ವಜಾಗೊಳಿಸುವ ಅಗತ್ಯವಿದೆ ಮತ್ತು ಅದಕ್ಕನುಸಾರವಾಗಿ ಊರ್ಜಿತ ಯೋಗ್ಯವಾಗಿರದ ಅದನ್ನು ವಜಾಗೊಳಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. (2013) 2 ಎಸ್‌ಸಿಸಿ 17*
*ಸುಭಾಷ್ ಚಂದ್ –ವಿರುದ್ಧ– ಸರ್ಕಾರ*
*(ದೆಹಲಿ ಆಡಳಿತ)* *(ಉಲ್ಲೇ) 4*

ಅಪೀಲುದಾರರ ಪರ : ಶ್ರೀ ಪಿ.ಎಂ. ನವಾಜ್, ಎಸ್‌ಪಿಪಿ–1.

**ತೀರ್ಪು**

**ನ್ಯಾಯಮೂರ್ತಿ ಮೋಹನ್ ಎಂ. ಶಾಂತನಗೌಡರ್:**

ಸಿ.ಸಿ. ಸಂ.23501/2015ರಲ್ಲಿ 2ನೇ ಹೆಚ್ಚುವರಿ ಸಿ.ಎಂ.ಎಂ. ನ್ಯಾಯಾಲಯ, ಬೆಂಗಳೂರು ದಿನಾಂಕ 22.01.2015 ರಲ್ಲಿ ಮಾಡಿದ ಖುಲಾಸೆ ಆದೇಶ ಮತ್ತು

ತೀರ್ಪನ್ನು, ಸರ್ಕಾರದಿಂದ ದಾಖಲು ಮಾಡಿದ ಈ ಕ್ರಿಮಿನಲ್ ಅಪೀಲನಲ್ಲಿ ಪ್ರಶ್ನಿಸಲಾಗಿದೆ.

2. ಭಾರತ ದಂಡ ಸಂಹಿತೆಯ 34ನೇ ಪ್ರಕರಣವನ್ನು ಓದಿಕೊಂಡು 232, 504, 326, 427ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ, ಆರೋಪಿಯನ್ನು ಅಧಿವಿಚಾರಣೆ ಮಾಡಲಾಗಿದೆ ಮತ್ತು ಖುಲಾಸೆ ಗೊಳಿಸಲಾಗಿದೆ. 326ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧವು, ಸಂಜ್ಞೇಯ ಮತ್ತು ಜಾಮೀನಿಯವಲ್ಲದ್ದಾಗಿದೆಯೆಂಬುದು ವಿವಾದಿತವಲ್ಲ. ಹಾಗಾಗಿ, ಕೆಳ ನ್ಯಾಯಾಲಯ, ಇತರೇ ಅಪರಾಧಗಳೊಂದಿಗೆ ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಅಪರಾಧ ಒಳಗೊಂಡಂತೆ ಆ ವಿಷಯವನ್ನು ಅಧಿವಿಚಾರಣೆ ಮಾಡಿದೆ ಮತ್ತು ಪ್ರಶ್ನಿತ ತೀರ್ಪು ಮತ್ತು ಆದೇಶದ ಮೂಲಕ ಆರೋಪಿಯನ್ನು ನಿರಪರಾಧಿಯೆಂದು ನಿರ್ಣಯಿಸಲಾಗಿದೆಯೆಂಬುದು ಸ್ಪಷ್ಟವಾಗಿದೆ.

3. ಸಿಆರ್‌ಪಿಸಿಯ 1973ರ 378ನೇ ಪ್ರಕರಣದ (1)(ಎ) ಮತ್ತು (ಬಿ) ಕೆಳಗಿನಂತಿದೆ:

> *"378. ನಿರಪರಾಧಿಯೆಂಬ ನಿರ್ಣಯದ ಸಂದರ್ಭದಲ್ಲಿ ಅಪೀಲು: [(1) 2ನೇ ಉಪ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಲಾದುದನ್ನಳಿದು (2), ಮತ್ತು (3) ಮತ್ತು (5)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು.*
>
> *(ಎ) ಜಿಲ್ಲಾ ಮ್ಯಾಜಿಸ್ಟ್ರೇಟರು, ಯಾವುದೇ ಪ್ರಕರಣದಲ್ಲಿ ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟ್‌ರಿಂದ ಮಾಡಿದ ನಿರಪರಾಧಿಯೆಂಬ ನಿರ್ಣಯದ ಆದೇಶದಿಂದ ಸೆಷನ್ಸ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಪಬ್ಲಿಕ್ ಪ್ರಾಸಿಕ್ಯೂಟರಿಗೆ ನಿರ್ದೇಶಿಸಬಹುದು.*

*(ಬಿ) ರಾಜ್ಯ ಸರ್ಕಾರವು, ಯಾವುದೇ ಪ್ರಕರಣದಲ್ಲಿ, [ಖಂಡ (ಎ) ಅಡಿಯಲ್ಲಿ ಆದೇಶವನ್ನು ಹೊಂದಿಲ್ಲದ ಅಥವಾ ಪುನರೀಕ್ಷಣೆಯಲ್ಲಿ ಸೆಷನ್ಸ್ ನ್ಯಾಯಾಲಯವು ಮಾಡಿದ ಖುಲಾಸೆಯ ಆದೇಶದ ಮೇಲೆ ಉಚ್ಚ ನ್ಯಾಯಾಲಯವಲ್ಲದ ಯಾವುದೇ ನ್ಯಾಯಾಲಯವು ಮಾಡಿದ ನಿರಪರಾಧಿಯೆಂಬ ನಿರ್ಣಯದ ಮೂಲ ಆದೇಶ ಅಥವಾ ಅಪೀಲು ಆದೇಶದ ಅಪೀಲನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲು ಪಬ್ಲಿಕ್ ಪ್ರಾಸಿಕ್ಯೂಟರಿಗೆ ನಿರ್ದೇಶಿಸಬಹುದು.]*

4. ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟ್‌ರಿಂದ ಮಾಡಿದ ನಿರಪರಾಧಿ ನಿರ್ಣಯದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸಲು ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ಮುಕ್ತರಾಗಿರುವುದಿಲ್ಲವೆಂದು ಮೇಲೆ ನಮೂದಿಸಲಾದ ಉಪಬಂಧದ ಕೇವಲ ಓದಿನಿಂದ ಸ್ಪಷ್ಟಗೊಳ್ಳುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 378(1)(ಎ) ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಮುಂದೆ ಅಂಥ ಅಪೀಲನ್ನು ಸಲ್ಲಿಸುವುದಕ್ಕಾಗಿ ಪ್ರವರ್ಗೀಕೃತವಾದ ಪ್ರತಿಷೇಧವಿರುತ್ತದೆ. ಮತ್ತೊಂದು ಕಡೆ, ಸೆಷನ್ಸ್ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸುವ ಅಗತ್ಯವಿದೆವೆಂಬುದು ಸದರಿ ಉಪಬಂಧದ ಆಜ್ಞಾಪಕವಾಗಿದೆ. ಅದೇ ದೃಷ್ಟಿಯಿಂದ, ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಅಪರಾಧದ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟ್‌ರಿಂದ ಮಾಡಿದ ಅಪರಾಧ ನಿರ್ಣಯ ಆದೇಶದ ವಿರುದ್ಧ ಪಬ್ಲಿಕ್ ಪ್ರಾಸಿಕ್ಯೂಟರ್/ಸರ್ಕಾರದಿಂದ ದಾಖಲು ಮಾಡಿದ ಅಪೀಲು, ಊರ್ಜಿತ ಯೋಗ್ಯವಾಗಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಸ್ಪಷ್ಟವಾದ ಉಪಬಂಧದ ದೃಷ್ಟಿಯಿಂದ ನಿರ್ಣಯಕ್ಕಾಗಿ ಯಾವುದೇ ತೀರ್ಪನ್ನು ಅವಲಂಬಿಸುವ ಮೂಲಕ ಅಗತ್ಯವಿಲ್ಲದಿದ್ದರೂ, ***ಸುಭಾಷ್ ಚಂದ್ –ವಿರುದ್ಧ– ಸರ್ಕಾರ (ದೆಹಲಿ ಆಡಳಿತ)*** [1] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಮಾಡಿದ ಅಭಿಪ್ರಾಯೋಕ್ತಿಗಳು ಪೂರಕವಾಗಿದೆಯೆಂಬ ಕಾರಣದಿಂದ ದಾಖಲೆ ಮೇಲೆ ಅದನ್ನು ಮಂಡಿಸಿದ್ದು, 18ನೇ ಕಂಡಿಕೆಯು ಮುಂದಿನಂತಿದೆ:

1. (2013) 2 ಎಸ್‌ಸಿಸಿ 17

*"18. 378(1)(ಎ) ಮತ್ತು (ಬಿ) ಪ್ರಕರಣಗಳನ್ನು ನಾವು ವಿಶ್ಲೇಷಿಸಿದ್ದು, ರಾಜ್ಯ ಸರ್ಕಾರವು, 378(1)(ಬಿ) ಪ್ರಕರಣದ ಮೂಲಕ ಸೃಜಿಸಲಾದ ಪ್ರವರ್ಗೀಕೃತ ಪ್ರತಿಷೇಧವಿರುವುದರಿಂದ ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಅಪರಾಧದ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟ್‌ರಿಂದ ಮಾಡಿದ ಅಪರಾಧ ನಿರ್ಣಯ ಆದೇಶದ ವಿರುದ್ಧ ಅಪೀಲನ್ನು ದಾಖಲು ಮಾಡಲು ಪಬ್ಲಿಕ್ ಪ್ರಾಸಿಕ್ಯೂಟರಿಗೆ ನಿರ್ದೇಶಿಸಲಾಗದು ಎಂಬುದು ಸ್ಪಷ್ಟವಾಗಿದೆ. ಅಂಥ ಅಪೀಲುಗಳು ಎಂದರೆ, ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಅಪರಾಧದ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟ್‌ರಿಂದ ಮಾಡಿದ ಖುಲಾಸೆ ಆದೇಶದ ವಿರುದ್ಧದ ಅಪೀಲುಗಳು, ಜಿಲ್ಲಾ ಮ್ಯಾಜಿಸ್ಟ್ರೇಟ್‌ರಿಂದ ನಿರ್ದೇಶಿಸಬಹುದಾದಂತೆ ಪಬ್ಲಿಕ್ ಪ್ರಾಸಿಕ್ಯೂಟರ್ ಮೊದಲನೇಯದಾಗಿ ಸೆಷನ್ಸ್ ನ್ಯಾಯಾಲಯದಲ್ಲಿ ಮಾತ್ರ ದಾಖಲು ಮಾಡಬಹುದು. 378(1)(ಬಿ) ಪ್ರಕರಣದಲ್ಲಿ ಬಳಸಲಾಗಿರುವ 'ಯಾವುದೇ ಪ್ರಕರಣದಲ್ಲಿ' ಎಂಬ ಪದಗಳನ್ನು ರಾಜ್ಯ ಸರ್ಕಾರದ ನಿಯಂತ್ರಣದಿಂದ ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಅಪರಾಧದ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟ್‌ರಿಂದ ಮಾಡಿದ ಖುಲಾಸೆ ಆದೇಶಗಳನ್ನು ಬಿಟ್ಟುಬಿಡುವುದು. ಆದ್ದರಿಂದ, ನಿರಪರಾಧಿ ನಿರ್ಣಯ ಆದೇಶಗಳು ಇತರೇ ಎಲ್ಲಾ ಪ್ರಕರಣಗಳಲ್ಲಿ, ಅಪೀಲುಗಳನ್ನು, ರಾಜ್ಯ ಸರ್ಕಾರದಿಂದ ನಿರ್ದೇಶಿಸಲಾದಂತೆ ಪಬ್ಲಿಕ್ ಪ್ರಾಸಿಕ್ಯೂಟರ್‌ರಿಂದ ಉಚ್ಚ ನ್ಯಾಯಾಲಯದ ಮುಂದೆ ದಾಖಲು ಮಾಡಬಹುದು."*

5. ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಅಪರಾಧಗಳು ಹಾಗೂ ಸಂಜ್ಞೇಯವಲ್ಲದ ಮತ್ತು ಜಾಮೀನಿಯ ಅಪರಾಧಗಳು ಸಂಬಂಧದಲ್ಲಿ ಭಾರತ ದಂಡ ಸಂಹಿತೆಯ ವಿವಿಧ ಪ್ರಕರಣಗಳ ಅಡಿಯಲ್ಲಿ ವಿವಿಧ ದಂಡನೀಯ ಅಪರಾಧಗಳು ಒಳಗೊಂಡಿರುವ ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ, ಆರೋಪಿಯನ್ನು, ಅಪರಾಧಗಳ ಸಂಬಂಧದಲ್ಲಿ, ನಿರಪರಾಧಿಯೆಂದು ನಿರ್ಣಯಿಸಿದ್ದಲ್ಲಿ, ಸೆಷನ್ಸ್ ನ್ಯಾಯಾಲಯದ

ಮುಂದೆ ಪಬ್ಲಿಕ್ ಪ್ರಾಸಿಕ್ಯೂಟರ್ ಮೂಲಕ ಸರ್ಕಾರದಿಂದ ದಾಖಲು ಮಾಡಬಹುದಾದ ಅಂಥ ಅಗತ್ಯ ಅಂಶದಲ್ಲಿ ಸಹ ನಿರಪರಾಧಿ ನಿರ್ಣಯ ಆದೇಶದ ವಿರುದ್ಧದ ಅಪೀಲನ್ನು 'ಕ್ರಿಮಿನಲ್ ಪ್ರಕರಣ' ರಷ್ಟರ ಮಟ್ಟಿಗೆ, ಮಾತ್ರವಾಗಿದೆಯೆಂಬುದನ್ನು ನಾವು ಸ್ಪಷ್ಟಪಡಿಸಿದ್ದೇವೆ. ಅಂಥ ಕ್ರಿಮಿನಲ್ ಪ್ರಕರಣ, ವಿವಿಧ ದಂಡನೀಯ ಪ್ರಕರಣಗಳನ್ನು ಒಳಗೊಂಡಿದ್ದರೂ, ಕ್ರಿಮಿನಲ್ ಪ್ರಕರಣವನ್ನು ಪ್ರತ್ಯೇಕಿಸಲಾಗದು, ಹಾಗೆಯೇ ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟ್‌ರಿಂದ ಮಾಡಿದ ನಿರಪರಾಧಿ ನಿರ್ಣಯ ಆದೇಶದ ವಿರುದ್ಧವಾಗಿ, ಸರ್ಕಾರದಿಂದ ಎರಡು ಅಪೀಲುಗಳನ್ನು ಅಂದರೆ, ಒಂದು ಸಂಜ್ಞೇಯ ಅಪರಾಧಗಳ ವಿರುದ್ಧ ಮತ್ತು ಬೇರೊಂದು ಸಂಜ್ಞೇಯವಲ್ಲದ ಅಪರಾಧಗಳ ವಿರುದ್ಧ ದಾಖಲಿಸಲಾಗದು. ಹಾಗಾಗಿ, ನಿರಪರಾಧಿ ನಿರ್ಣಯ ಆದೇಶದ ವಿರುದ್ಧ ಸೆಷನ್ಸ್ ನ್ಯಾಯಾಲಯದ ಮುಂದೆ ಈ ಅಪೀಲು ಬಂದಿದ್ದು, ಆರೋಪಿಯನ್ನು ಸಂಜ್ಞೇಯ ಹಾಗೂ ಸಂಜ್ಞೇಯವಲ್ಲದ ಮತ್ತು ಜಾಮೀನಿಯ ಹಾಗೂ ಜಾಮೀನಿಯವಲ್ಲದಂತೆ (ಪ್ರಸ್ತುತ ವಿಷಯದಂತೆ) ಎರಡೂ ಅಪರಾಧಗಳಲ್ಲಿ ನಿರಪರಾಧಿಯೆಂದು ನಿರ್ಣಯಿಸಲಾಗಿದೆ.

ಹಾಗಾಗಿ, ಊರ್ಜಿತ ಯೋಗ್ಯವಾಗಿರದ ಅಪೀಲನ್ನು ವಜಾಗೊಳಿಸುವ ಅಗತ್ಯವಿದೆ ಮತ್ತು ಅದಕ್ಕನುಸಾರವಾಗಿ ಊರ್ಜಿತ ಯೋಗ್ಯವಾಗಿರದ ಅದನ್ನು ***ವಜಾಗೊಳಿಸಲಾಗಿದೆ.***

ಅದು, ಅಗತ್ಯವಿದ್ದಲ್ಲಿ, ಸೆಷನ್ಸ್ ನ್ಯಾಯಾಲಯದ ಮುಂದೆ ಅಪೀಲನ್ನು ಹೂಡುವುದಕ್ಕೆ ಸರ್ಕಾರಕ್ಕೆ ಮುಕ್ತ ಅವಕಾಶವಿದೆ.

ಸೆಷನ್ಸ್ ನ್ಯಾಯಾಲಯದ ಮುಂದೆ ಅಪೀಲು ಹೂಡಲು ಸರ್ಕಾರವನ್ನು ಸಮರ್ಥಗೊಳಿಸುವುದಕ್ಕಾಗಿ ಅದರ ಫೋಟೋ ಪ್ರತಿಗಳನ್ನು ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರಿಗೆ ನೀಡುವ ಮೂಲಕ ಎಲ್ಲಾ ಸುಸಂಬದ್ಧ ಪತ್ರಗಳನ್ನು ವಾಪಸ್ಸು ನೀಡಲು ರಿಜಿಸ್ಟ್ರಿಗೆ ನಿರ್ದೇಶಿಸಲಾಗಿದೆ.

ಈ ತೀರ್ಪಿನ ಪ್ರತಿಯನ್ನು, ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ, ಪ್ರಾಸಿಕ್ಯೂಷನ್ ನಿರ್ದೇಶಕರು, ಪೊಲೀಸ್ ಮಹಾನಿರ್ದೇಶಕರು ಮತ್ತು ಪ್ರಧಾನ ಕಾರ್ಯದರ್ಶಿಗಳು, ಗೃಹ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಕಳುಹಿಸತಕ್ಕದ್ದು.

---